

ಕೊಡುತ್ತಿರುತ್ತಾನೆ.

ಹುಚ್ಚ ಎಲ್ಲೆಲ್ಲಿ ಅಲೆದಾಡಿದರೂ ಮಲಗಲು ಮಾತ್ರ ರಾಮಾಲಯದ ಮುಂದಿದ್ದ ಮರಳಿಗೇ ಮರಳುತ್ತಿದ್ದ.

ಈಗ ಕೆಲಸವಿಲ್ಲದ ಕಾರಣ ಹಳ್ಳಿಯ ಯುವಕರು ಹಾಗೂ ಮಕ್ಕಳು ಭಜನೆ ಕಲಿಯುತ್ತಿದ್ದಾರೆ. ತಾಲ್ಲೂಕು ಕೇಂದ್ರದಿಂದ ಭಜನೆಯ ಗುರುಗಳು ಹಾಗೂ ಮದ್ದಲೆಯ ನುಡಿಕಾರ ಮೋಟರು ಬೈಕಿನಲ್ಲಿ ಬರುತ್ತಾರೆ. ಆ ವೇಳೆಗಾಗಲೇ ದೊಡ್ಡ ಮಕ್ಕಳು, ಯುವಕರು ಹಳದಿ ಅಂಗಿ ಹಾಗೂ ಅದೇ ಬಣ್ಣದ ಪಂಚೆಯನ್ನು ಗೋಸಿಯಂತೆ ಹಿಂದಕ್ಕೆಳೆದು ಕಟ್ಟಿಕೊಂಡು ಸಿದ್ಧರಾಗಿರುತ್ತಾರೆ. ಕಾಲಿಗೆ ಗೆಜ್ಜೆ, ಕೈಯಲ್ಲಿ ಭಜನೆಯ ಚೆಕ್ಕೆಗಳು. ಗುರುಗಳು ಬಂದ ಕೂಡಲೇ ರಾಮಾಲಯದಲ್ಲಿ ಚೀಲದಲ್ಲಿರಿಸಿದ್ದ ತಂತಮ್ಮ ಉಡುಪುಗಳನ್ನು ಧರಿಸಿ ಸಿದ್ಧರಾಗುತ್ತಾರೆ. ಸುತ್ತಲೂ ವೃತ್ತಾಕಾರದಲ್ಲಿ ಭಜನೆ ಕಲಿಯುವವರು ಇದ್ದರೆ ಮಧ್ಯದಲ್ಲಿ ಮದ್ದಲೆ ವಾದ್ಯಗಾರ ಕೂರುತ್ತಾನೆ. ಭಜನೆ ಪ್ರಾರಂಭವಾಗುತ್ತದೆ. ಅದಕ್ಕನುಗುಣವಾಗಿ ಮದ್ದಲೆಯ ಸದ್ದು ಕೇಳಿಸುತ್ತದೆ. ಭಜನೆಯ